ಶ್ರೀ ಕೆ.ಬಿ.ಮಲ್ಲಿಕಾರ್ಜುನ್:- ಅವರು ಒಪ್ಪಿಗೆ ಕೊಟ್ಟಿದ್ದಾರೆ. ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಇದೆ ಎಂದು ಹಿರಿಯ ಸಚಿವರಾಗಿರತಕ್ಕಂಥ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಒಪ್ಪಿಗೆ ಕೊಟ್ಟಿದ್ದಾರೆ. ತಾವು ಈಗ ಆ ಬಗ್ಗೆ ರೂಲಿಂಗ್ ಕೊಡಲು ತೊಂದರೆ ಏನು ಇದೆ?

(interruptions)

MR SPEAKER: I am sorry about this kind of affairs here.

ಶ್ರೀ ಎಸ್.ಎಸ್ ಪಾಟೀಲ್: ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಇದೆ. ಆ ಮಾತು ಬೇರೆ. ಹಿರಿಯ ಸಚಿವರು ಸಭೆಯಲ್ಲಿ ಇದ್ದಾರೆ. ಅವರು ಒಪ್ಪಿಕೊಳ್ಳುತ್ತಾರೆ ಸರ್ಕಾರದ ಪರವಾಗಿ.

ಶ್ರೀ ಡಿ.ಬಿ.ಚಂದ್ರೇಗೌಡ: ತಾವು ತಮ್ಮ ಜಾಗಕ್ಕೆ ಹೋಗದೆ ಅವರು ಹೇಗೆ ರೂಲಿಂಗ್ ಕೊಡುತ್ತಾರೆ?

ಅಧ್ಯಕ್ಷರು: ನೋಟಿಸ್ ಈಗ ಬಂದಿರುವುದರಿಂದ until I consult the Leader of the House, I cannot take suo motu decision, ಎಂದು ನಾನು ಹೇಳುತ್ತಿರುವುದು ಅಷ್ಟೇ. ಇನ್ನೇನೂ ಇಲ್ಲ. ತಾವು ದಯವಿಟ್ಟು ನಿಮ್ಮ ನಿಮ್ಮ ಜಾಗಗಳಿಗೆ ಹೋಗಿ.

ಶ್ರೀ ಎಸ್.ಎಸ್.ಪಾಟೀಲ್: ಸಾಮೂಹಿಕವಾದ ಜವಾಬ್ದಾರಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಇದೆ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ.

ಅಧ್ಯಕ್ಷರು: ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

ಸದನವು 12 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು

(ಮಾನ್ಯ ಅಧ್ಯಕ್ಷರು ಶ್ರೀ ಎಂವಿ.ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿದ್ದರು)

ಅಧ್ಯಕ್ಷರು: ಈಗ ತಮಗೆಲ್ಲಾ ಗೊತ್ತಿರಬಹುದು. ನಮ್ಮ ಚೇಂಬರ್‌ನಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಶೆಟ್ಟರ್, ಶ್ರೀ ಸಿಂಧ್ಯಾ, ಶ್ರೀ ಸದಾನಂದಗೌಡ ಮತ್ತು ನಮ್ಮ ಶ್ರೀ ಚಂದ್ರೇಗೌಡ, ಮುಖ್ಯ ಸಚೇತಕರು ಎಲ್ಲರೂ ಕೂತು ಮಾತನಾಡಿದ್ದೇವೆ. ಈಗ ನೀವೇನು ಹೊಸದಾಗಿ ನಿಯಮ 69ರ ಕೆಳಗೆ ಕೊಟ್ಟಿದ್ದೀರಿ ಅದನ್ನು ಪ್ರಶ್ನೋತ್ತರ ವೇಳೆ ನಂತರ ಚರ್ಚೆಗೆ ತೆಗೆದುಕೊಳ್ಳಬಹುದೆಂದು ಎಲ್ಲರಿಗೂ ಒಪ್ಪಿಗೆ ಆಗಿದೆ. ಈಗಾಗಲೇ ಭಾಜಪ ಪಕ್ಷದವರೆಲ್ಲಾ ಒಂದು ಸೀಟಿನಲ್ಲಿ ಕುಳಿತಿದ್ದಾರೆ. ಸಂತೋಷ ಶ್ರೀ ಸಿಂಧ್ಯಾ ಅವರು ಬಹಿಷ್ಕಾರ ಹಾಕಿರುವುದನ್ನು ದಯವಿಟ್ಟು ವಾಪಸ್ಸು ತೆಗೆದಕೊಳ್ಳಬೇಕು. ಈಗ ಪ್ರಶ್ನೋತ್ತರ ವೇಳೆ.